ಕುಟುಂಬ ಮದುವೆ ಮಕ್ಕಳು ಎಂಬ ಎಂದಿನ ಜಾಡಿನಲ್ಲಿ ಮುಂದುವರೆದರೆ ಸಾಕು. ಅವಳ ಈ ನಿರ್ಧಾರ ಅವಳಲ್ಲಿ ಒಂದಿಷ್ಟು ಜೀವನೋತ್ಸಾಹವನ್ನು ತುಂಬಿತು.

ಆದರೆ, ಇಲ್ಲದ ಉಪದ್ರವಗಳನ್ನು ಸೃಷ್ಟಿಸುತ್ತಿರುವ ಕಂಪ್ಯೂಟರಿನ ದೆಸೆಯಿಂದ ಅವಳಿಗೆ ಕಣ್ಣುರಿಯಾಗತೊಡಗಿತು. ಆ ಎದೆ ಬೇನೆಯನ್ನು ನಿವಾರಿಸಲು ಏನಾದರೂ ಒಂದು ಕ್ರಮವನ್ನು ಕೈಗೊಳ್ಳಲೇಬೇಕೆಂದು ನಿರ್ಧರಿಸಿದಳು. ಹೀಗಾಗಿ ಅನೇಕ ದಿನಗಳ ವರೆಗೆ ಆಲೋಚನೆ ಮಾಡಿದ ಆಕೆ ಕಂಪ್ಯೂಟರಿಗೆ ಗತಿ ಕಾಣಿಸುವ ಒಂದು ಪಕ್ಕಾ ಯೋಜನೆಯನ್ನು ತಯಾರಿಸತೊಡಗಿದಳು .

ಆ ದಿನ ನಯಾಜ್ ತನ್ನ ಸ್ನೇಹಿತರ ಜೊತೆಯಲ್ಲಿ ಎಲ್ಲೋ ಹೊರ ಹೋಗಿದ್ದ. ಅವಳು ತನ್ನ ಇದ್ದ ಬದ್ದ ಶಕ್ತಿಯನ್ನೆಲ್ಲ ಕ್ರೋಢೀಕರಿಸಿಕೊಂಡು ಗೇಟಿನ ಬಳಿ ಬಂದು ಒಂದಿಷ್ಟು ಹೊತ್ತು ನಿಂತಳು. ಇನ್ನೂ ತನಗೆ ನಿಶ್ಶಕ್ತಿ ಇದೆ ಅಂತ ಅನಿಸಿದರೂ ಆಕೆ ಎದೆಗುಂದಲಿಲ್ಲ. ಅಲ್ಲಿ ಹೋಗುತ್ತಿದ್ದ ರಿಕ್ಷವೊಂದನ್ನು ನಿಲ್ಲಿಸಿದಳು. ಪುಣ್ಯಕ್ಕೆ ಅವನು ಮೊಹಲ್ಲಾದ ಹುಡುಗನೇ ಆಗಿದ್ದ. 'ಒಂದಿಷ್ಟು ನಿಂತ್ಕೊಳಪ್ಪ ಕೈಸರ್' ಎಂದು ಹೇಳಿ ಅವಳು ಲಗುಬಗೆಯಿಂದ ಮನೆಯೊಳಗೆ ಓಡಿದಳು. ಅಲ್ಲಿಂದ ಅವಳು ಚಕಚಕನೆ ವೈರ್‌ಗಳನ್ನೆಲ್ಲಾ ಎಳೆದೆಳೆದು ಹಾಕಿದಳು ಮತ್ತು ಎರಡೂ ಕೈಗಳಿಂದ ಕಂಪ್ಯೂಟರಿನ ಮಾನಿಟರನ್ನು ಅವುಚಿ ಹಿಡಿದು ಅದನ್ನು ಹೊತ್ತುಕೊಂಡು ಮನೆಯಿಂದಾಚೆ ನಡೆದಳು. ಅವಳ ಗಡಿಬಿಡಿ ಮತ್ತು ಆತುರದಲ್ಲಿ ಹಾಗೂ ಮಗನ ಬಗ್ಗೆ ಇದ್ದ ಹೆದರಿಕೆಯಲ್ಲಿ ಮಾಡಬಾರದ ಕೃತ್ಯವನ್ನು ತಾನು ಎಸಗುತ್ತಿದ್ದೇನೆ ಎಂಬ ಭೀತಿಯಲ್ಲಿ ಅವಳು ಆ ದೆವ್ವದಂತಹ ಮಾನಿಟರನ್ನು ಹೊತ್ತು ಬಾಗಿಲ ಬಳಿ ಬರುವಷ್ಟರಲ್ಲಿ ಅವಳ ಸೆರಗು ಯಾವುದೊ ಮಾಯದಲ್ಲಿ ಭುಜದಿಂದ ಸರಿದು ಅವಳ ಪಾದಗಳ ಬಳಿ ತೊಡರತೊಡಗಿತು. ಹಾಗೆಯೆ ಸೆರಗನ್ನು ಮತ್ತು ಮಾನಿಟರನ್ನು ಜೊತೆ ಜೊತೆಯಲ್ಲಿ ಎಳೆದಾಡುತ್ತಾ ಏಗಲಾರದೆ ಏದುಸಿರು ಬಿಡುತ್ತಾ ಬಂದ ಆಕೆಯನ್ನು ಕಂಡು ಕೈಸರ್‌ನಿಗೆ ಆಶ್ಚರ್ಯವಾಯಿತು. ಅವನು ಕೂಡಲೇ ರಸ್ತೆ ಬದಿಯಿಂದ ಮನೆಯ ಬಳಿ ಓಡಿ ಬಂದು ಅವಳ ಕೈಯಿಂದ ಮಾನಿಟರನ್ನು ಇಸಿದು ಕೊಂಡ ಹಾಗೂ ಇದನ್ನು ಏನು ಮಾಡಬೇಕು ಎನ್ನುವಂತಹ ಪ್ರಶ್ನಾರ್ಥಕ ನೋಟವನ್ನು ಅವಳತ್ತ ಬೀರಿದ. ಅವಳು ಸುಧಾರಿಸಿಕೊಳ್ಳುತ್ತ ಸೆರಗನ್ನು ಸರಿಯಾಗಿ ತಲೆಯ ಮೇಲಿಂದ ಹೊದೆಯುತ್ತ ಭುಜದ ಸುತ್ತ ಸುತ್ತುತ್ತ ಮನೆಗೆ ಬೀಗವನ್ನು ಹಾಕಿ ಬೀಗದ ಎಸಳನ್ನು ತನ್ನ ಪರ್ಸ್‌ನಲ್ಲಿ ಇಟ್ಟು ಕೊಂಡು 'ನಡೀ ಇದನ್ನು ತೆಗೆದುಕೊಂಡು ಯಾವುದಾದರು ಕಂಪ್ಯೂಟರ್ ಅಂಗಡಿಗೆ ನಡೀ' ಎಂದಳು. ಅವಳ ನಡವಳಿಕೆ ಕೈಸರ್‌ಗೆ ಸಹಜವಾಗಿ ಕಂಡು ಬರಲಿಲ್ಲ. ಅವಳ ವಿಲಕ್ಷಣತೆಯನ್ನು ಗಮನಿಸಿದರೂ ಅವನು ವಿಧೇಯನಾಗಿ ಅವಳ ಆಜ್ಞೆಯನ್ನು ಪಾಲಿಸಿದ. ಅವಳನ್ನು ಆಟೋದಲ್ಲಿ ಸರಿಯಾಗಿ ಕೂರಿಸಿ ಅವಳ ತೊಡೆಯ ಮೇಲೆ ಮಾನಿಟರನ್ನು ಇಟ್ಟು 'ಗಟ್ಟಿಯಾಗಿ ಹಿಡಿದುಕೊಳ್ಳಿ' ಎಂದು ಹೇಳುತ್ತ ಆಟೋ ಓಡಿಸತೊಡಗಿದ. ಮತ್ತು ಯಾವ ಅಂಗಡಿಗೆ ಅವಳನ್ನು ಕರೆದುಕೊಂಡು ಹೋಗಬೇಕು ಎಂದು ಆಲೋಚಿಸಿದ. ಕೊನೆಗೆ ಅವನು ತನ್ನ ಗೆಳೆಯನಾದ ಮುಜೀಬ್‌ನ ಅಂಗಡಿ ಎದುರು ನಿಲ್ಲಿಸಿ, ಆಕೆ ಹಿಡಿದು ತಂದಿದ್ದ ಮಾನಿಟರನ್ನು ಅಂಗಡಿಯೊಳಗೆ ತಲುಪಿಸಿದ. ಇನ್ನೇನು ಅವನು ಹಣ ಪಡೆದು ಹೊರಡಬೇಕು ಎಂದು ನಿರ್ಧರಿಸುವಷ್ಟರಲ್ಲಿ ರೆಹಮತ್ ಹೇಳಿದಳು 'ನೋಡಪ್ಪಾ ನೀನು ಮುಜೀಬ್ ಅಲ್ಲವಾ? ನಮ್ಮಾ ಹೈದರ ಸಾಬರ ಮೊಮ್ಮಗ ಹೌದಲ್ವ? ನೋಡು ಈ ಕಂಪ್ಯೂಟರೊಳಗೆ ಯಾರು ಯಾರೋ ಟೆರರಿಸ್ಟ್‌ಗಳು ಸೇರಿಕೊಂಡು ನಮ್ಮ ಹುಡುಗನನ್ನು ಕರೀತಿದಾರೆ. ಟೆರರಿಸ್ಟ ಆಗೂ ಅಂತ' ಎಂದು ಹೇಳಿ ಒಂದು ದೋಷಾರೋಪಣೆಯ ನೋಟವನ್ನು ಅವರಿಬ್ಬರ ಮೇಲೆ